KACM510001962025

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,

ನರಸಿಂಹರಾಜಪುರ.

ದಿನಾಂಕ 01 ನೇ ಜುಲೈ 2026

- ಉಪಸ್ಥಿತರು -

ಶ್ರೀ ರಘುನಾಥಗೌಡ ಕೆ.ಟಿ., ಬಿ.ಕಾಂ., ಎಲ್.ಎಲ್.ಬಿ. ,
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನರಸಿಂಹರಾಜಪುರ

**ಸಿ.ಸಿ. ಸಂಖ್ಯೆ .13/2025**

ಫಿರ್ಯಾದುದಾರರು: ರಾಜ್ಯದ ಪರವಾಗಿ ನರಸಿಂಹರಾಜಪುರ ಪೊಲೀಸ್

(ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿನಿಧಿಸುವರು)

ವಿರುದ್ಧ

ಆರೋಪಿತರು : 1. ಶ್ರೀ ಕೃಷ್ಣಮೂರ್ತಿ, ಬಿನ್ ಲೇಟ್ ಸಿದ್ಧಪ್ಪ ಗೌಡ,
ವಯಸ್ಸು 65 ವರ್ಷ, ಕೂಲಿ ಕೆಲಸ,
ವಾಸ ಃ ಕರ್ಕೂಟ,
ಸಾರ್ಯ, ಹೊನ್ನೆಕೂಡಿಗೆ,
ನ.ರಾ.ಪುರ ತಾಲ್ಲೂಕು.

2. ಶ್ರೀ ರಾಮಪ್ಪ ಕೆ.ಸಿ., ಬಿನ್ ಲೇಟ್ ಚಂದುಪೂಜಾರಿ,
ವಯಸ್ಸು 61 ವರ್ಷ, ವ್ಯವಸಾಯ ವೃತ್ತಿ,
ವಾಸ ಃ ಸಿಂಸೆಕಲ್ಲು,
ಈಚಿಕೆರೆ ಗ್ರಾಮ,
ನ.ರಾ.ಪುರ ತಾಲ್ಲೂಕು.

**(2 ನೇ ಆರೋಪಿ ಮೃತಪಟ್ಟಿರುತ್ತಾರೆ )**

**(ಪ್ರತಿನಿಧಿಸುವವರು: ಶ್ರೀ ಕೆ.ಎಸ್.ಎಸ್., ವಕೀಲರು)**

| | | |
|---|---|---|
| ಅಪರಾಧ ನಡೆದ ದಿನಾಂಕ | : | 06.01.2025 |
| ವರದಿ ಮಾಡಿದ ದಿನಾಂಕ | : | 07.01.2025 |
| ಆರೋಪಿಯನ್ನು ದಸ್ತಗಿರಿ ಮಾಡಿದ ದಿನಾಂಕ | : | -- |

| | | |
|---|---|---|
| ಆರೋಪಿಯನ್ನು ಬಿಡುಗಡೆ ಮಾಡಿದ ದಿನಾಂಕ | : | -- |
| ಪಿರ್ಯಾದುದಾರರ ಹೆಸರು | : | ಶ್ರೀ ರಮೇಶ್ ಡಿ. |
| ಸಾಕ್ಷಿದಾರರ ವಿಚಾರಣೆ ಆರಂಭಿಸಿದ ದಿನಾಂಕ | : | 09.02.2026 |
| ಸಾಕ್ಷಿದಾರರ ವಿಚಾರಣೆ ಮುಗಿದ ದಿನಾಂಕ | : | 02.06.2026 |
| ಅಪರಾಧ ಕಲಂಗಳು | : | ಕಲಂ.281, 125(ಎ ಮತ್ತು ಬಿ) ಹಾಗೂ ಕಲಂ.106(1) ಭಾರತೀಯ ನಾಗರಿಕ ಸಂಹಿತೆ ಕಾಯ್ದೆ ಹಾಗೂ ಕಲಂ.181 ಹಾಗೂ 196 ಮೋಟಾರ್ ವಾಹನ ಕಾಯ್ದೆ |
| ತೀರ್ಪಿನ ದಿನಾಂಕ | : | 01.07.2026 |
| ನ್ಯಾಯಾಧೀಶರ ತೀರ್ಪು | : | 1 ನೇ ಆರೋಪಿಯನ್ನು ಆರೋಪದಿಂದ ದೋಷ ಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ. |

RAGHUNATHA GOWDA K T
Digitally signed by RAGHUNATHA GOWDA K T
Date: 2026.07.01 18:22:35 +0530

(ರಘುನಾಥಗೌಡ ಕೆ.ಟಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನರಸಿಂಹರಾಜಪುರ.

## :: ತೀರ್ಪು ::

ಈ ಮೊಕದ್ದಮೆಯಲ್ಲಿ ಎನ್.ಆರ್.ಪುರ ಠಾಣಾ ಪೋಲಿಸರು ಆಪಾದಿತರ ವಿರುದ್ಧ ಕಲಂ.281, 125(ಎ ಮತ್ತು ಬಿ) ಹಾಗೂ ಕಲಂ.106(1) ಭಾರತೀಯ ನಾಗರಿಕ ಸಂಹಿತೆ ಕಾಯ್ದೆ ಹಾಗೂ ಕಲಂ.181 ಮತ್ತು 196 ಮೋಟಾರ್ ವಾಹನ ಕಾಯ್ದೆಯಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧದ ಬಗ್ಗೆ ದೋಷಾರೋಪಣ ಪತ್ರವನ್ನು

Visit **ecourts.gov.in** for updates or download mobile app "**eCourts Services**" from Android or iOS

ಸಲ್ಲಿಸಿರುತ್ತಾರೆ. ತನಿಖಾಧಿಕಾರಿಯು ದೋಷಾರೋಪಣ ಪತ್ರ ಸಲ್ಲಿಸುವ ಕಾಲಕ್ಕೆ ಆರೋಪಿ 2 ರವರು ಮೃತಪಟ್ಟಿರುತ್ತಾರೆ.

2. **ಮೊಕದ್ದಮೆಯ ಸಾರಾಂಶ –**

ದಿನಾಂಕಃ 06.01.2025 ರಂದು ಬೆಳಗ್ಗೆ 9–00 ಗಂಟೆಯ ಸಮಯದಲ್ಲಿ ನ.ರಾ.ಪುರ ತಾಲ್ಲೂಕು, ಮೂಡಬಾಗಿಲು ಗ್ರಾಮದ ಶಾಂತಿಭವನ ಕ್ರಾಸ್ ಹತ್ತಿರ 1 ನೇ ಆರೋಪಿಯು ತನ್ನ ಬಾಬ್ತು ಟಿ.ವಿ.ಎಸ್. ಎಕ್ಸ್.ಎಲ್. ಸ್ಕೂಟರ್ ಸಂಖ್ಯೆ ಕೆಎ.18 – ಇಕೆ.7321 ರಲ್ಲಿ ತನ್ನ ಹೆಂಡತಿಯಾದ ಶಾಂತಮ್ಮರವರನ್ನು ಕೂರಿಸಿಕೊಂಡು ನ.ರಾ.ಪುರ ಕಡೆಗೆ ಹೋಗಲು ಸಾರ್ಯ ರಸ್ತೆಯಿಂದ ಬಾಳೆಹೊನ್ನೂರು – ನ.ರಾ.ಪುರ ರಸ್ತೆಗೆ ದುಡುಕು ಮತ್ತು ನಿರ್ಲಕ್ಷ್ಯತನದಿಂದ ಚಾಲನೆ ಮಾಡಿದ್ದು ಇದೇ ಸಮಯಕ್ಕೆ ನ.ರಾ.ಪುರದಿಂದ ಮೂಡಬಾಗಿಲು ಕಡೆಗೆ ಹೋಗುತ್ತಿದ್ದ ಹೋಂಡಾ ಶೈನ್ ಬೈಕ್ ಸಂಖ್ಯೆ ಕೆಎ.50 – ಆರ್.6305 ಕ್ಕೆ ಡಿಕ್ಕಿ ಹೊಡೆಯಿಸಿ ಅಪಘಾತ ಮಾಡಿದ್ದು, ಇದರಿಂದ ಹೋಂಡಾ ಶೈನ್ ಬೈಕಿನ ಚಾಲಕ ರಾಮಪ್ಪರವರ ತಲೆಗೆ ತೀವ್ರ ಸ್ವರೂಪದ ಗಾಯವಾಗಿ ಚಿಕಿತ್ಸೆ ಫಲಕಾರಿಯಾಗದೇ, ದಿನಾಂಕಃ 07.01.2025 ರಂದು ರಾತ್ರಿ 12–01 ಕ್ಕೆ ಮೃತಪಟ್ಟಿರುವುದು, ಈ ಅಪಘಾತದಲ್ಲಿ ಹೋಂಡಾ ಶೈನ್ ಬೈಕಿನ ಹಿಂಭಾಗದಲ್ಲಿ ಕುಳಿತ್ತಿದ್ದ ಫಿರ್ಯಾದಿಯ ಹಣೆಯ ಹತ್ತಿರ ಸಾಮಾನ್ಯ ಸ್ವರೂಪದ ಗಾಯವಾಗಿದ್ದು, ಕೆಎ.18 – ಇಕೆ.7321 ರ ಟಿ.ವಿ.ಎಸ್. ಎಕ್ಸ್.ಎಲ್. ಸ್ಕೂಟರಿನ ಚಾಲಕ ಕೃಷ್ಣಮೂರ್ತಿರವರ ತಲೆಗೆ ತೀವ್ರ ಸ್ವರೂಪದ ಗಾಯವಾಗಿದ್ದು ಹಾಗೂ ಹಿಂಬದಿಯ ಸವಾರರಾದ ಶಾಂತಮ್ಮರವರಿಗೆ ತೀವ್ರ ಸ್ವರೂಪದ ಗಾಯವುಂಟಾಗಿದ್ದು, ಆ ಸಂಬಂಧ ಚಾಸಾ–1 ರವರು ದೂರನ್ನು ನೀಡಿದ್ದು. ನಂತರ ತನಿಖಾಧಿಕಾರಿಗಳು ತನಿಖೆಯನ್ನು ಕೈಗೊಂಡು ಆರೋಪಿತರ ವಿರುದ್ಧ ಕಲಂ.281, 125 (ಎ) (ಬಿ) ಹಾಗೂ ಕಲಂ.106(1) ಭಾರತೀಯ ನಾಗರಿಕ ಸಂಹಿತೆ ಕಾಯ್ದೆ ಹಾಗೂ ಕಲಂ.181 ಮತ್ತು 196 ಮೋಟಾರ್ ವಾಹನ

ಕಾಯ್ದೆಯಡಿಯಲ್ಲಿ ಅಪರಾದ ಮಾಡಿರುತ್ತಾರೆ ಎಂದು ಆರೋಪಿಸಿ ಈ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

3. ಮೊಕದ್ದಮೆಯನ್ನು ದಾಖಲಿಸಿಕೊಂಡು ಆರೋಪಿ 1 ರವರಿಗೆ ಸಮನ್ಸ ಜಾರಿ ಮಾಡಲಾಗಿ, ಆರೋಪಿಯು ತನ್ನ ವಕೀಲರ ಮೂಲಕ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾನೆ. ಆರೋಪಿ 2 ರವರು ತೀರಿಕೊಂಡ ಕಾರಣ ಅವರ ವಿರುದ್ಧ ಪ್ರಕರಣವನ್ನು ಅಬೇಟ್ (ಕೈಬಿಡಲಾಗಿರುತ್ತದೆ) ಮಾಡಲಾಗಿರುತ್ತದೆ. ತದನಂತರ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ.230 ರಡಿಯಲ್ಲಿ ಆರೋಪಿ –1 ರವರಿಗೆ ಆರೋಪ ಪತ್ರದ ನಕಲನ್ನು ಜಾರಿ ಮಾಡಿ, ಆರೋಪಣೆಯನ್ನು ತಯಾರಿಸಿ, ಆರೋಪಿ –1 ರವರಿಗೆ ಓದಿ ಹೇಳಲಾಗಿ, ಆರೋಪಿಯು ತಾನು ತಪ್ಪು ಮಾಡಿಲ್ಲ ಎಂದು ಹೇಳಿ ವಿಚಾರಣೆ ಆಗುವಂತೆ ಕೇಳಿಕೊಂಡಿದ್ದರಿಂದ ಮೊಕದ್ದಮೆಯನ್ನು ಅಭಿಯೋಜನೆಯ ಪರ ಸಾಕ್ಷಿ ವಿಚಾರಣೆಗೆ ಇಡಲಾಯಿತು.

4. ಅಭಿಯೋಜನೆಯ ಪರ ಪ್ರಾಸಾ–1 ರಿಂದ ಪ್ರಾಸಾ–7 ಸಾಕ್ಷಿದಾರರನ್ನು ವಿಚಾರಣೆ ಮಾಡಿ, ದಸ್ತಾವೇಜು ನಿಪಿ–1 ರಿಂದ ನಿಪಿ–22 ನ್ನು ಗುರುತಿಸಿಕೊಂಡಿರುತ್ತಾರೆ ಹಾಗೂ ಉಳಿದ ಸಾಕ್ಷಿದಾರರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ವಿಚಾರಣೆಯಿಂದ ಕೈಬಿಟ್ಟಿರುತ್ತಾರೆ. ಅಭಿಯೋಜನೆ ಪರ ಸಾಕ್ಷಿ ವಿಚಾರಣೆ ಮುಗಿದ ತದನಂತರ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ.351 ರಡಿಯಲ್ಲಿ ಆರೋಪಿತನ ಹೇಳಿಕೆಯನ್ನು ಮಾಡಿಕೊಳ್ಳಲಾಯಿತು. ಆರೋಪಿತನು ಎಲ್ಲಾ ಪ್ರಶ್ನೆಗಳನ್ನು ಅಲ್ಲಗಳೆದಿರುತ್ತಾನೆ. ಆರೋಪಿತನು ತನ್ನ ಪರ ಸಾಕ್ಷ್ಯ ಇಲ್ಲ ಎಂದು ನುಡಿದಿರುತ್ತಾನೆ.

5. ಉಭಯತ್ರರರ ವಾದವನ್ನು ಕೇಳಲಾಯಿತು.

6. ಈ ಮೊಕದ್ದಮೆಯನ್ನು ತೀರ್ಮಾನಿಸಲು ಈ ಕೆಳಕಂಡ ಅಂಶಗಳು ನನ್ನ ಅವಗಾಹನೆಗೆ ಉದ್ಭವಿಸಿರುತ್ತದೆ.

**– ಅಂಶಗಳು –**

ಅಂಶ 1 – ದಿನಾಂಕ - 06.01.2025 ರಂದು, ಬೆಳಿಗ್ಗೆ 9-00 ಗಂಟೆ ಸಮಯದಲ್ಲಿ ನ.ರಾ.ಪುರ ಪೋಲಿಸ್ ಠಾಣಾ ವ್ಯಾಪ್ತಿಯ ನ.ರಾ.ಪುರ ತಾಲ್ಲೂಕು ಮೂಡಬಾಗಿಲು ಗ್ರಾಮದ ಶಾಂತಿಭವನ ಕ್ರಾಸ್ ಹತ್ತಿರ 1 ನೇ ಆರೋಪಿಯು ತನ್ನ ಬಾಬ್ತು ಟಿ.ವಿ.ಎಸ್. ಎಕ್ಸ್.ಎಲ್. ಸ್ಕೂಟರ್ ಸಂಖ್ಯೆ ಕೆಎ.18 – ಇಕೆ.7321 ರಲ್ಲಿ ಗಾಯಾಳು ಶಾಂತಮ್ಮರವರನ್ನು ಕೂರಿಸಿಕೊಂಡು ನ.ರಾ.ಪುರ ಕಡೆಗೆ ಹೋಗಲು ಸಾರ್ವಜನಿಕ ರಸ್ತೆಯಿಂದ ಬಾಳೆಹೊನ್ನೂರು – ನ.ರಾ.ಪುರ ರಸ್ತೆಗೆ ಮಾನವ ಪ್ರಾಣಕ್ಕೆ ಅಪಾಯ ಉಂಟಾಗುವ ರೀತಿಯಲ್ಲಿ ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿ ಕೊಂಡು ಬಂದು ನ.ರಾ.ಪುರದಿಂದ ಮೂಡಬಾಗಿಲು ಕಡೆಗೆ ಚಲಾಯಿಸಿಕೊಂಡು ಹೋಗುತ್ತಿದ್ದ 2 ನೇ ಅರೋಪಿಯ ಹೋಂಡಾ ಶೈನ್ ಬೈಕ್ ಸಂಖ್ಯೆ.ಕೆಎ.50 – ಆರ್.6305 ರ ಬೈಕಿಗೆ ಡಿಕ್ಕಿ ಹೊಡೆಯಿಸಿ ಅಪಘಾತ ಮಾಡಿದ್ದು, ಆ ಮೂಲಕ ಆರೋಪಿಯು ಭಾರತೀಯ ನ್ಯಾಯ ಸಂಹಿತೆ ಕಲಂ.281 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತಾನೆಂದು ಅಭಿಯೋಜನೆ ಯವರು ನಿಸ್ಸಂಶಯವಾಗಿ ರುಜುವಾತುಪಡಿಸುವರೇ?

ಅಂಶ 2 – ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ ಸದರಿ ಅಪಘಾತದಿಂದಾಗಿ ಕೆಎ.50 – ಆರ್.6305 ರ ಹೋಂಡಾ ಶೈನ್ ಬೈಕಿನ ಹಿಂದೆ ಕುಳಿತ್ತಿದ್ದ ಫಿರ್ಯಾದಿ / ಚಾಸಾ–1 ರವರ ಹಣೆಯ ಹತ್ತಿರ ಸಾಮಾನ್ಯ ಸ್ವರೂಪದ ಗಾಯವಾಗಿದ್ದು, ಆ ಮೂಲಕ ಆರೋಪಿಯು ಭಾರತೀಯ ನಾಗರೀಕ ಸಂಹಿತೆ ಕಲಂ.125(ಎ)ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ವನ್ನು ಮಾಡಿರುತ್ತಾನೆಂದು ಅಭಿಯೋಜನೆಯವರು ನಿಸ್ಸಂಶಯವಾಗಿ ರುಜುವಾತುಪಡಿಸುವರೇ ?

ಅಂಶ 3 – ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ ಸದರಿ ಅಪಘಾತದಿಂದಾಗಿ 1 ನೇ ಆರೋಪಿಯ ತಲೆಗೆ ಮತ್ತು ಶಾಂತಮ್ಮರವರಿಗೂ ತೀವ್ರ ಸ್ವರೂಪದ ಗಾಯವಾಗಿದ್ದು ಹಾಗೂ ಕೆಎ.50 – ಆರ್.6305 ರ ಹೋಂಡಾ ಶೈನ್ ಬೈಕಿನ ಚಾಲಕ 2 ನೇ ಆರೋಪಿ ರಾಮಪ್ಪರವರ ತಲೆಗೆ ತೀವ್ರ ಸ್ವರೂಪದ ಗಾಯ ವಾಗಿದ್ದು, ಆ ಮೂಲಕ ಆರೋಪಿಯು ಭಾರತೀಯ ನಾಗರೀಕ ಸಂಹಿತೆ ಕಲಂ.125(ಬಿ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ವನ್ನು ಮಾಡಿರುತ್ತಾನೆಂದು ಅಭಿಯೋಜನೆಯವರು ನಿಸ್ಸಂಶಯವಾಗಿ ರುಜುವಾತುಪಡಿಸುವರೇ ?

ಅಂಶ 4– ಸದರಿ ಅಪಘಾತದಿಂದಾಗಿ ದಿನಾಂಕಃ 07.01.2025 ರಂದು ರಾತ್ರಿ 12.01 ಕ್ಕೆ ಕೆಎ.50 – ಆರ್.6305 ರ ಹೋಂಡಾ ಶೈನ್ ಬೈಕಿನ ಚಾಲಕ 2 ನೇ ಆರೋಪಿ ರಾಮಪ್ಪರವರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದು, ಕಾರಣ

ಆರೋಪಿಯು ಭಾರತೀಯ ನಾಗರೀಕ ಸಂಹಿತೆ ಕಲಂ.106(1)ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ವನ್ನು ಮಾಡಿರುತ್ತಾನೆಂದು ಅಭಿಯೋಜನೆಯವರು ನಿಸ್ಸಂಶಯವಾಗಿ ರುಜುವಾತು ಪಡಿಸುವರೇ?

ಅಂಶ 5 – ಯಾವ ಆದೇಶ ?

7. ಮೇಲ್ಕಂಡ ಅಂಶಗಳಿಗೆ ಮುಂದೆ ಹೇಳಲಾದ ಕಾರಣಗಳಿಗಾಗಿ ಕೆಳಕಂಡಂತೆ ಉತ್ತರಿಸಿದೆ.

ಅಂಶ 1 ರಿಂದ 4 ...... ನಕಾರಾತ್ಮಕವಾಗಿ,

ಅಂಶ 5 ...... ಅಂತಿಮ ಆದೇಶದಂತೆ,

ಈ ಕೆಳಕಂಡ ಕಾರಣಗಳಿಗಾಗಿ

**ಕಾರಣಗಳು**

8. **ಅಂಶ – 1 ರಿಂದ 4** – ಸದರಿ 1 ರಿಂದ 4 ಅಂಶಗಳಲ್ಲಿ ಅಡಕವಾಗಿರುವ ವಿಷಯ ಒಂದಕ್ಕೊಂದು ಪೂರಕವಾಗಿರುವುದರಿಂದ ಮತ್ತು ಪುನರಾವರ್ತನೆ ಆಗುವುದನ್ನು ತಪ್ಪಿಸುವ ಸಲುವಾಗಿ ಈ ನಾಲ್ಕು ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

9. ಪ್ರಮುಖವಾಗಿ ಅಭಿಯೋಜನೆಯು ದಿನಾಂಕ 06.01.2025 ರಂದು ಬೆಳಿಗ್ಗೆ 9–00 ಗಂಟೆ ಸುಮಾರಿಗೆ 1 ಆರೋಪಿಯು ಚಲಾಯಿಸುತ್ತಿದ್ದ ಬೈಕ್ ಸಂಖ್ಯೆ ಕೆಎ.18 – ಇಕೆ.7321 ಬೈಕನ್ನು ವರ್ಕಟ್ಟೆ ರಸ್ತೆಯಿಂದ ಬಾಳೆಹೊನ್ನೂರು – ಎನ್.ಆರ್.ಪುರ ಮುಖ್ಯ ರಸ್ತೆಯ ಶಾಂತಿಭವನ ಸರ್ಕಲ್ ಹತ್ತಿರ ಯಾವುದೆ ಸೂಚನೆ ನೀಡದೆ ಎನ್.ಆರ್.ಪುರ ಟೌನ್ ಕಡೆಗೆ ದುಡುಕು ಹಾಗೂ ನಿರ್ಲಕ್ಷ್ಯತನದಿಂದ ಚಾಲನೆ ಮಾಡಿಕೊಂಡು ಬಂದು ಆರೋಪಿ–2 ರವರು ಚಲಾಯಿಸಿಕೊಂಡು ಬರುತ್ತಿದ್ದ ಬೈಕ್ ಸಂಖ್ಯೆ ಕೆಎ.50 – ಆರ್.6305 ಬೈಕಿಗೆ ಡಿಕ್ಕಿಪಡಿಸಿದ ಕಾರಣ

ಚಾಸಾ-1 ಮತ್ತು 2 ರವರಿಗೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿದ್ದಲ್ಲದೆ ಸದರಿ ಅಪಘಾತದಿಂದ ರಾಮಪ್ಪ ಇವರ ತಲೆಗೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿ ನಂತರ ದಿನಾಂಕಃ 07.01.2025 ರಂದು ರಾತ್ರಿ 12-01 ಗಂಟೆಗೆ ತೀರಿಕೊಂಡಿರುತ್ತಾರೆ ಎಂಬ ಅಂಶಗಳನ್ನು ರುಜುವಾತುಪಡಿಸುವ ಗುರುತರವಾದ ಜವಾಬ್ದಾರಿ ಅಭಿಯೋಜನೆಯ ಮೇಲಿರುತ್ತದೆ.

10. ಅಭಿಯೋಜನೆ ಪರ ವಾದವನ್ನು ಸಿದ್ಧಪಡಿಸಲು ಪ್ರಾಸಾ-1 ರಮೇಶ್ ಇವರು ಈ ಪ್ರಕರಣದ ದೂರುದಾರರು, ಕೃತ್ಯ ಸ್ಥಳದ ಪಂಚನಾಮೆ ಮತ್ತು ಅಮಾನತು ಪಂಚನಾಮೆಯ ಸಾಕ್ಷಿದಾರರಾಗಿದ್ದು, ಇವರನ್ನು ವಿಚಾರಣೆಗೆ ಒಳಪಡಿಸಿದ್ದು, ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದೂರಿನಲ್ಲಿ ಹೇಳಿದ ಅಂಶಗಳನ್ನು ಪುನರಾವರ್ತನೆ ಮಾಡಿರುತ್ತಾರೆ ಹಾಗೂ ನಂತರ ತಾವು ಠಾಣೆಗೆ ಬಂದು ದೂರನ್ನು ಕೊಟ್ಟಿದ್ದು, ಆನಂತರ ಪೋಲಿಸರು ತಮ್ಮ ಮುಂದೆ ಕೃತ್ಯ ಸ್ಥಳದ ಪಂಚನಾಮೆ ಮತ್ತು ವಾಹನಗಳ ಅಮಾನತು ಪಂಚನಾಮೆ ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಸದರಿ ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ಸದರಿಯವರು ತಮ್ಮ ಪಾಟೀ ಸವಾಲಿನಲ್ಲಿ ದೂರನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ದೂರಿನಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ, ನನಗೆ ದೂರಿನಲ್ಲಿ ಸಹಿ ಮಾಡಿರುವುದನ್ನು ಹೊರತುಪಡಿಸಿ ಅದರಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದೂರಿನಲ್ಲಿ ಯಾರ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂಬ ಬಗ್ಗೆ ಬರೆದಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ತಮ್ಮ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ. ಪ್ರಾಸಾ-1 ರವರ ಸಾಕ್ಷ್ಯವನ್ನು ಪರಿಶೀಲಿಸಿದಾಗ ಅಪಘಾತವಾಗಿದೆ ಎಂದು ಹೇಳುವ ಕಾಲಕ್ಕೆ ಮೃತ ರಾಮಪ್ಪ ಇವರಿಗೆ ಚಾಲನಾ ಪರವಾನಿಗೆ ಪತ್ರ, ಬೈಕಿಗೆ ಮಾಲೀಕತ್ವ ಪ್ರಮಾಣ ಪತ್ರ ಹಾಗೂ ವಿಮೆ ಇರಲಿಲ್ಲ ಎಂಬ ಅಂಶಗಳು ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

11. ಅಭಿಯೋಜನೆಯ ಪ್ರಕಾರ ಫ್ರಾಸಾ–1ರವರ ಸಮಕ್ಷಮ ಕೃತ್ಯ ಸ್ಥಳದ ಪಂಚನಾಮೆ ಮತ್ತು ಅಮಾನತು ಪಂಚನಾಮೆ ಮಾಡಿರುವುದಾಗಿ ಅಭಿಯೋಜನೆಯು ತಿಳಿಸಿದ್ದು, ಆದರೆ ಫ್ರಾಸಾ–1ರವರು ಮಹಜರಿನಲ್ಲಿ ಪೊಲೀಸರು ಏನು ಬರೆದಿರುತ್ತಾರೆ ಎಂದು ತಮಗೆ ಗೊತ್ತಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುವುದು ಕಂಡು ಬಂದಿರುತ್ತದೆ. ಫ್ರಾಸಾ–1ರವರ ಸಾಕ್ಷ್ಯವನ್ನು ಪರಿಶೀಲಿಸಿದಾಗ ಸದರಿಯವರು ತಮಗೆ ದೂರಿನಲ್ಲಿ ಬರೆದ ವಿಚಾರಗಳ ಬಗ್ಗೆ ಮತ್ತು ಯಾರ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂಬ ಬಗ್ಗೆ ಗೊತ್ತಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುವುದು ಕಂಡು ಬಂದಿರುತ್ತದೆ.

12. ಫ್ರಾಸಾ–2 ಶ್ರೀಮತಿ ಶಾಂತಮ್ಮ ಇವರು ಅಪಘಾತದ ಹಿನ್ನೆಲೆಯಲ್ಲಿ ಗಾಯಾಳುವಾಗಿದ್ದು, ಇವರು ತಮಗೆ ಅಪಘಾತದಿಂದ ತಮ್ಮ ಗಂಡನ ತಲೆಗೆ, ಕೆನ್ನೆ, ಮೂಗು ಮತ್ತು ಹಲ್ಲುಗಳಿಗೆ ಪೆಟ್ಟಾಗಿದ್ದು, ಸದರಿ ಅಪಘಾತವು ಬೈಕ್ ಚಾಲಕನ ತಪ್ಪಿನಿಂದ ಆಗಿದ್ದು, ಪೊಲೀಸರು ತಮ್ಮನ್ನು ವಿಚಾರಣೆ ಮಾಡಿ ಯಾವುದೆ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದು, ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿದರೂ ಸಹಾ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗುವಂತಹ ಯಾವುದೆ ಅಂಶಗಳನ್ನು ಸಾಬೀತುಪಡಿಸಿರುವುದಿಲ್ಲ ಹಾಗೂ ಸಹಾಯಕ ಸರ್ಕಾರಿ ಅಭಿಯೋಜಕರು ಸೂಚಿಸಿದ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ.

13. ಅಭಿಯೋಜನೆಯು ತಮ್ಮ ಪ್ರಕರಣ ಸಾಬೀತುಪಡಿಸುವ ಸಂಬಂಧ ಫ್ರಾಸಾ–3 ಕೃಷ್ಣಮೂರ್ತಿ ಇವರನ್ನು ವಿಚಾರಣೆಗ ಒಳಪಡಿಸಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ–1ರವರು ತಮಗೆ ಫೋನ್ ಮಾಡಿ ಶಾಂತಿಭವನದ ಹತ್ತಿರ ಅಪಘಾತವಾಗಿದೆ ಬಾ ಎಂದು ಹೇಳಿದ್ದು, ತಾವು ಸದರಿ ಸ್ಥಳಕ್ಕೆ ಹೋಗಿ ತಮ್ಮ ಕಾರಿನಲ್ಲಿ ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಿದ ಬಗ್ಗೆ ನಂತರ ರಾಮಪ್ಪ ಇವರು

ಶಿವಮೊಗ್ಗ ಆಸ್ಪತ್ರೆಯಲ್ಲಿ ತೀರಿಕೊಂಡ ಬಗ್ಗೆ ಈ ಸಂಬಂಧ ತಾವು ಪೊಲೀಸರಿಗೆ ಹೇಳಿಕೆ ಕೊಟ್ಟ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಸದರಿ ಸಾಕ್ಷಿಯನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು, ತಮ್ಮ ಪಾಟೀ ಸವಾಲಿನಲ್ಲಿ ನಾನು ಸ್ಥಳದಲ್ಲಿ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ಸಾರ್ವಜನಿಕರನ್ನು ವಿಚಾರಣೆ ಮಾಡಿರುವುದಿಲ್ಲ. ಫ್ರಾಸಾ–3 ರವರ ಸಾಕ್ಷ್ಯವನ್ನು ಪರಿಶೀಲಿಸಿದಾಗ ಸದರಿಯವರು ಅಪಘಾತವಾದ ನಂತರ ಸ್ಥಳಕ್ಕೆ ಭೇಟಿ ಕೊಟ್ಟು ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಿದ ಬಗ್ಗೆ ಸಾಕ್ಷ್ಯ ನುಡಿದಿದ್ದು, ಆದರೆ ಯಾರ ತಪ್ಪಿನಿಂದ ಮತ್ತು ಹೇಗೆ ಅಪಘಾತವಾಗಿರುತ್ತದೆ ಎಂಬುದವರ ಬಗ್ಗೆ ತಾನು ಅಲ್ಲಿಂದ ಸ್ಥಳೀಯರನ್ನು ವಿಚಾರಣೆ ಮಾಡದಿರುವುದು ಕಂಡು ಬಂದಿರುತ್ತದೆ.

14. ಫ್ರಾಸಾ–4 ಸೋಮಶೇಖರ್, ಇವರು ಕೃತ್ಯ ಸ್ಥಳದ ಪಂಚನಾಮೆ ಮಾಡುವ ಕಾಲಕ್ಕೆ ಹಾಗೂ ಅಮಾನತು ಮಹಜರ್ ಮಾಡುವ ಕಾಲಕ್ಕೆ ಹಾಜರಿದ್ದ ಸಾಕ್ಷಿದಾರರು ಇದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 13.01.2025 ರಂದು ಬೆಳಿಗ್ಗೆ 10–45 ರ ಸುಮಾರಿಗೆ ಬಾಳೆಹೊನ್ನೂರು – ಎನ್.ಆರ್.ಪುರ ರಸ್ತೆಯ ಶಾಂತಿಭವನ ಸರ್ಕಲ್ ಹತ್ತಿರ ಪೊಲೀಸರು ಮಹಜರಿಗೆ ಬಂದಿದ್ದು, ತಮ್ಮ ಸಮಕ್ಷಮ ಕೃತ್ಯ ಸ್ಥಳದ ಪಂಚನಾಮೆ ಮಾಡಿದ ಬಗ್ಗೆ ಅದೇ ದಿನ ಎನ್.ಆರ್.ಪುರ ಪೊಲೀಸ್ ಠಾಣಾ ಆವರಣದಲ್ಲಿ ಇದ್ದ ಎರಡು ಬೈಕುಗಳನ್ನು ಅಮಾನತು ಮಹಜರ್ ಮೂಲಕ ವಶಪಡಿಸಿಕೊಂಡ ಬಗ್ಗೆ ಹಾಗೂ ಭಾವಚಿತ್ರ ತೆಗೆದಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಸದರಿ ಸಾಕ್ಷಿಯನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು ಸದರಿಯವರು ತಮ್ಮ ಪಾಟೀ ಸವಾಲಿನಲ್ಲಿ ಮಹಜರಿಗೆ ಯಾರು ಯಾರು ಸಹಿ ಮಾಡಿರುತ್ತಾರೆ ಮತ್ತು ಏನೇನು ಬರೆದಿರುತ್ತಾರೆ ಎಂದು ತಮಗೆ ಗೊತ್ತಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.

15. ಫ್ರಾಸಾ–5 ಜಾರ್ಜ್, ಇವರು ಕೃತ್ಯ ಸ್ಥಳದ ಪಂಚನಾಮೆ ಮಾಡುವ ಕಾಲಕ್ಕೆ ಹಾಗೂ ಅಮಾನತು ಮಹಜರ್ ಮಾಡುವ ಕಾಲಕ್ಕೆ ಹಾಜರಿದ್ದ ಸಾಕ್ಷಿದಾರರು

Visit **ecourts.gov.in** for updates or download mobile app "**eCourts Services**" from Android or iOS

ಇದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 13.01.2025 ರಂದು ಬೆಳಿಗ್ಗೆ 10–45 ರ ಸುಮಾರಿಗೆ ಬಾಳೆಹೊನ್ನೂರು – ಎನ್.ಆರ್.ಪುರ ರಸ್ತೆಯ ಶಾಂತಿಭವನ ಸರ್ಕಲ್ ಹತ್ತಿರ ಪೊಲೀಸರು ಮಹಜರಿಗೆ ಬಂದಿದ್ದು, ತಮ್ಮ ಸಮಕ್ಷಮ ಕೃತ್ಯ ಸ್ಥಳದ ಪಂಚನಾಮೆ ಮಾಡಿದ ಬಗ್ಗೆ ಅದೇ ದಿನ ಎನ್.ಆರ್.ಪುರ ಪೊಲೀಸ್ ಠಾಣಾ ಆವರಣದಲ್ಲಿ ಇದ್ದ ಎರಡು ಬೈಕುಗಳನ್ನು ಅಮಾನತು ಮಹಜರ್ ಮೂಲಕ ವಶಪಡಿಸಿಕೊಂಡ ಬಗ್ಗೆ ಹಾಗೂ ಭಾವಚಿತ್ರ ತೆಗೆದಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಸದರಿ ಸಾಕ್ಷಿಯನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು ಸದರಿಯವರು ತಮ್ಮ ಪಾಟೀ ಸವಾಲಿನಲ್ಲಿ ಮಹಜರಿಗೆ ಯಾರು ಯಾರು ಸಹಿ ಮಾಡಿರುತ್ತಾರೆ ಮತ್ತು ಏನೇನು ಬರೆದಿರುತ್ತಾರೆ ಎಂದು ತಮಗೆ ಗೊತ್ತಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.

16. ಪ್ರಾಸಾ–6 ನಿರಂಜನ್ ಗೌಡ ಬಿ.ಎಸ್., ಇವರು ಈ ಪ್ರಕರಣದ ಭಾಗಶಃ ತನಿಖಾಧಿಕಾರಿಯಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 07.01.2025 ರಂದು ತಾವು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ–1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ, ಪ್ರಕರಣ ದಾಖಲಿಸಿದ ಬಗ್ಗೆ ಅದೇ ದಿನ ಬೆಳಗ್ಗೆ 9–45 ಗಂಟೆಯಿಂದ 11–45 ಗಂಟೆಯವರೆಗೆ ಮೃತ ರಾಮಪ್ಪ ಇವರ ಶವ ತನಿಖಾ ವರದಿಯನ್ನು ಚಾಸಾ–6 ಮತ್ತು 7 ರವರ ಸಮಕ್ಷಮ ಮಾಡಿದ ಬಗ್ಗೆ ಅದೇ ದಿನ ಚಾಸಾ–8 ರಿಂದ 11 ರವರ ಹೇಳಿಕೆಗಳನ್ನು ಪಡೆದುಕೊಂಡು ನಂತರ ಪ್ರಕರಣದ ಕಡತವನ್ನು ಚಾಸಾ–19 ರವರಿಗೆ ವಹಿಸಿಕೊಟ್ಟ ಬಗ್ಗೆ ಸಾಕ್ಷ್ಯ ನುಡಿದಿದ್ದು, ಆರೋಪಿ ಪರ ವಕೀಲರು ಸದರಿ ಸಾಕ್ಷಿಯನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿಯವರು ತಮ್ಮ ಪಾಟೀ ಸವಾಲಿನಲ್ಲಿ ಅಪಘಾತದ ಬಗ್ಗೆ ನಮಗೆ ಎನ್.ಆರ್.ಪುರ ಸರ್ಕಾರಿ ಆಸ್ಪತ್ರೆಯಿಂದ ಮಾಹಿತಿ ಬಂದಿತ್ತು ಎಂದರೆ ಸರಿ. ಸದರಿ ಮಾಹಿತಿ ಬಂದ ನಂತರ ನಾನು ಅಪಘಾತ ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರು ವುದಿಲ್ಲ ಎಂದರೆ ಸರಿ.

17. ಪ್ರಾಸಾ–7 ಗುರುದತ್ ಕಾಮತ್, ಪೊಲೀಸ್ ವೃತ್ತ ನಿರೀಕ್ಷಕರು ಇವರು ತನಿಖಾಧಿಕಾರಿ ಆಗಿದ್ದು, ಅಭಿಯೋಜಕರು ತಮ್ಮ ಪರ ವಾದವನ್ನು ಸಿದ್ದಪಡಿಸಲು ವಿಚಾರಣೆ ಮಾಡಿರುತ್ತಾರೆ. ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 07.01.2025 ರಂದು ಈ ಪ್ರಕರಣದ ಕಡತವನ್ನು ಚಾಸಾ–16 ರವರಿಂದ ಸ್ವೀಕರಿಸಿ ಅವರು ಅಲ್ಲಿಯವರೆಗೆ ಮಾಡಿದ ತನಿಖೆಯನ್ನು ಪರಿಶೀಲಿಸಿ ದಿನಾಂಕ 13.01.2025 ರಂದು ಚಾಸಾ–1 ರವರು ತೋರಿಸಿದ ಸ್ಥಳದಲ್ಲಿ ಚಾಸಾ–4 ಮತ್ತು 5 ರವರ ಸಮಕ್ಷಮ ಕೃತ್ಯ ಸ್ಥಳದ ಪಂಚನಾಮೆಯನ್ನು ಹಾಗೂ ಅದೇ ದಿನ ಠಾಣಾ ಆವರಣದಲ್ಲಿದ್ದ ಎರಡು ಮೋಟಾರ್ ಸೈಕಲ್ಲುಗಳ ಅಮಾನತು ಪಂಚನಾಮೆಯನ್ನು ಮಾಡಿದ ಬಗ್ಗೆ ಸದರಿ ವಾಹನಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸುವಂತೆ ಕಲಂ.133 ಮೋಟಾರ್ ವಾಹನ ಕಾಯ್ದೆಯಡಿಯಲ್ಲಿ ನೋಟೀಸ್ ನೀಡಿದ ಬಗ್ಗೆ, ವಾಹನ ತಪಾಸಣಾ ವರದಿಯನ್ನು ಸ್ವೀಕರಿಸಿದ ಬಗ್ಗೆ ಮೃತ ರಾಮಪ್ಪ ಇವರ ಮರಣೋತ್ತರ ಪರೀಕ್ಷಾ ವರದಿ ಹಾಗೂ ಗಾಯಾಳುವಿನ ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡ ಬಗ್ಗೆ ಮತ್ತು ಮೋಟಾರ್ ಸೈಕಲುಗಳನ್ನು ಇಂಡೆಮ್ನಿಟಿ ಬಾಂಡ್‌ಗಳ ಮೇಲೆ ಬಿಡುಗಡೆಗೊಳಿಸಿದ್ದು, ಆರೋಪಿಯ ವಿರುದ್ಧ ಸಾಕ್ಷ್ಯಾಧಾರಗಳು ಲಭ್ಯವಾದ ಕಾರಣ ದೋಷಾರೋಪಣೆ ಪಟ್ಟಿ ಸಲ್ಲಿಸಿರುವ ಬಗ್ಗೆ ಸಾಕ್ಷ್ಯವನ್ನು ನುಡಿದಿರುತ್ತಾರೆ.

18. ಆರೋಪಿ ಪರ ವಕೀಲರು ಸದರಿ ಸಾಕ್ಷಿಯನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿಯವರು ತಮ್ಮ ಪಾಟೀ ಸವಾಲಿನಲ್ಲಿ ತಾವು ಪಂಚನಾಮೆಗೆ ಬರುವಂತೆ ಯಾವುದೇ ನೋಟೀಸ್ ಕೊಟ್ಟಿರುವುದಿಲ್ಲ. ಸ್ಥಳ ಪಂಚನಾಮೆ ಮಾಡುವ ಕಾಲಕ್ಕೆ ಅಪಘಾತವಾದ ಸ್ಥಳದ ಬಳಿ ಯಾವುದೆ ಬಿಡಿ ಭಾಗಗಳನ್ನು ಅಮಾನತುಪಡಿಸಿ ಕೊಂಡಿಲ್ಲ. ಮಹಜರ್ ಮಾಡುವ ಕಾಲಕ್ಕೆ ಥಾಮಸ್ ಬೇಬಿ ಅವರ ಟೀ ಅಂಗಡಿ ಇದ್ದು, ಅವರನ್ನು ನಾನು ವಿಚಾರಣೆ ಮಾಡಿರುವುದಿಲ್ಲ ಹಾಗೂ ಆರೋಪಿತರ

ತಪ್ಪಿನಿಂದ ಅಪಘಾತವಾಗಿರುತ್ತದೆ ಎಂಬ ಬಗ್ಗೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

19. ಮೇಲಿನ ಎಲ್ಲಾ ಅಭಿಯೋಜನೆಯ ಪರ ಸಾಕ್ಷ್ಯಗಳನ್ನು ಪರಿಶೀಲಿಸಿದಾಗ ಫ್ರಾಸಾ-1 ರವರು ಈ ಪ್ರಕರಣದ ಗಾಯಾಳು ಇದ್ದು, ಇವರು ತಮ್ಮ ಪಾಟೀ ಸವಾಲಿನಲ್ಲಿ ದೂರಿನಲ್ಲಿ ಬರೆದ ವಿಚಾರಗಳ ಬಗ್ಗೆ ತಮಗೆ ಗೊತ್ತಿರುವುದಿಲ್ಲ. ಕೃತ್ಯ ಸ್ಥಳ ಪಂಚನಾಮೆ ಹಾಗೂ ಅಮಾನತು ಪಂಚನಾಮೆಯಲ್ಲಿ ಬರೆದ ವಿಚಾರಗಳ ಬಗ್ಗೆ ಗೊತ್ತಿರುವುದಿಲ್ಲ. ಮೃತ ರಾಮಪ್ಪ ಇವರು ಚಾಲನಾ ಪರವಾನಿಗೆ ಪತ್ರ ಮತ್ತು ವಾಹನದ ಮಾಲೀಕತ್ವ ಪ್ರಮಾಣ ಪತ್ರ ಹೊಂದಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುವುದು ಕಂಡು ಬಂದಿರುತ್ತದೆ. ಮುಂದುವರೆದು ಫ್ರಾಸಾ-2 ಈ ಪ್ರಕರಣದ ಗಾಯಾಳು ಮತ್ತು ಪ್ರತ್ಯಕ್ಷ ಸಾಕ್ಷಿ ಇದ್ದು, ಇವರು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದಲ್ಲದೆ ಪೊಲೀಸರು ತಮ್ಮನ್ನು ವಿಚಾರಣೆ ಮಾಡಿ ಯಾವುದೆ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ಫ್ರಾಸಾ-3 ರವರು ಅಪಘಾತವಾದ ನಂತರ ಸ್ಥಳಕ್ಕೆ ಭೇಟಿ ನೀಡಿದ್ದು, ಸದರಿಯವರು ಅಪಘಾತವನ್ನು ಕಂಡ ಪ್ರತ್ಯಕ್ಷ ಸಾಕ್ಷಿದಾರರು ಇರುವುದಿಲ್ಲ ಮತ್ತು ಅವರು ಸ್ಥಳಕ್ಕೆ ಹೋದಾಗ ಅಲ್ಲಿದ್ದ ಜನರನ್ನು ಯಾರ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂಬ ಬಗ್ಗೆ ವಿಚಾರಿಸದೆ ಇರುವುದು ಕಂಡು ಬಂದಿರುತ್ತದೆ.

20. ಮುಂದುವರೆದು ಕೃತ್ಯ ಸ್ಥಳದ ಪಂಚನಾಮೆ ಮತ್ತು ಅಮಾನತು ಪಂಚನಾಮೆ ಮಾಡುವ ಕಾಲಕ್ಕೆ ಹಾಜರಿದ್ದ ಫ್ರಾಸಾ-4 ಮತ್ತು 5 ರವರು ತಮಗೆ ಮಹಜರ್ ನಲ್ಲಿ ಏನೇನು ಬರೆದಿರುತ್ತಾರೆ ಮತ್ತು ಯಾರು ಯಾರು ಸಹಿ ಮಾಡಿರುತ್ತಾರೆ ಎಂಬ ಬಗ್ಗೆ ಗೊತ್ತಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ಈ ಪ್ರಕರಣದ ತನಿಖಾಧಿಕಾರಿಯು ತಮ್ಮ ತನಿಖೆಯ ಕಾಲಕ್ಕೆ ಸದರಿ ಕೃತ್ಯ ಸ್ಥಳದಲ್ಲಿದ್ದ ಯಾವುದೇ ಸಾರ್ವಜನಿಕರಲ್ಲಿ ಅಪಘಾತದ ಕುರಿತು ಅವರ ಹೇಳಿಕೆಗಳನ್ನು ಪಡೆದುಕೊಂಡಿರು ವುದಿಲ್ಲ. ಅಲ್ಲದೆ ಕೃತ್ಯ ಸ್ಥಳದ ಹತ್ತಿರ ಟೀ ಅಂಗಡಿ ಇದ್ದು, ಸದರಿ

ಅಂಗಡಿ ಮಾಲೀಕರನ್ನು ತಮ್ಮ ತನಿಖೆಯ ಕಾಲಕ್ಕೆ ವಿಚಾರಣೆ ಮಾಡದೆ ಇರುವುದು ಕಂಡು ಬಂದಿರುತ್ತದೆ. ಮೇಲಿನ ಎಲ್ಲಾ ಸಾಕ್ಷ್ಯಗಳನ್ನು ಪರಿಶೀಲಿಸಿದಾಗ ಆ ದಿನ 1 ನೇ ಆರೋಪಿಯು ಸದರಿ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬರುತ್ತಿದ್ದ ಎಂಬುದರ ಬಗ್ಗೆ ಯಾವುದೇ ಪ್ರತ್ಯಕ್ಷ ಸಾಕ್ಷಿಗಳು 1 ನೇ ಆರೋಪಿಯ ಅಜಾಗರೂಕತೆಯಿಂದ ಅಪಘಾತ ಉಂಟಾಗಿರುತ್ತದೆ ಎಂದು ತಮ್ಮ ಸಾಕ್ಷ್ಯದಲ್ಲಿ ಹೇಳದೇ ಇರುವುದು ಕಂಡುಬಂದಿರುತ್ತದೆ ಹಾಗೂ ಕೇವಲ ಈ ಪ್ರಕರಣದ ಗಾಯಾಳುವಾದ ಚಾಸಾ–1 ರವರ ಸಾಕ್ಷ್ಯದ ಆಧಾರದ ಮೇಲೆ ಹೇಳಿದ ಆರೋಪಕ್ಕೆ 1 ನೇ ಆರೋಪಿಯನ್ನು ದಂಡನೆಗೆ ಒಳಪಡಿಸಲು ಬರುವುದಿಲ್ಲ. ಮೇಲಿನ ಎಲ್ಲಾ ಸಾಕ್ಷಗಳನ್ನು ಪರಿಶೀಲಿಸಿದಾಗ 1 ನೇ ಆರೋಪಿಯು ಆ ದಿನ ಸದರಿ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಅಪಘಾತ ಪಡಿಸಿದ ಸಂಬಂಧ ಫ್ರಾಸಾ–1 ಮತ್ತು 2 ರವರಿಗೆ ತೀವ್ರ ಸ್ವರೂಪದ ಗಾಯಗಳುಂಟಾಗಿದ್ದಲ್ಲದೆ ರಾಮಪ್ಪ ಮೃತ ಪಟ್ಟಿರುತ್ತಾರೆ ಎಂಬ ಅಂಶಗಳನ್ನು ರುಜುವಾತುಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿರುವುದು ಕಂಡು ಬಂದಿರುತ್ತದೆ ಹಾಗೂ ಯಾವುದೇ ಪ್ರತ್ಯಕ್ಷ ಸಾಕ್ಷಿಗಳು ಸಹ ಆ ದಿನ ಅಪಘಾತ ಆಗುವ ಕಾಲಕ್ಕೆ 1 ನೇ ಆರೋಪಿಯು ಸದರಿ ಬೈಕನ್ನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡುತ್ತಿದ್ದ ಎಂಬುದರ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ಕಂಡುಬಂದಿರುವುದಿಲ್ಲ. ಅಭಿಯೋಜನೆಯ ಪರ ಸಾಕ್ಷ್ಯಾಧಾರಗಳು ಒಂದಕ್ಕೊಂದು ಪೂರಕವಾಗಿರುವುದಿಲ್ಲ. ಈ ಎಲ್ಲಾ ಕಾರಣಗಳಿಗಾಗಿ ಅಭಿಯೋಜನೆಯು 1 ನೇ ಆರೋಪಿಯ ಮೇಲೆ ಮಾಡಿದ ಆರೋಪವನ್ನು ರುಜುವಾತುಪಡಿಸುವಲ್ಲಿ ವಿಫಲರಾಗಿದ್ದಾರೆ ಎಂದು ತೀರ್ಮಾನಿಸಿ, **ಅಂಶ 1 ರಿಂದ 4 ನ್ನು ನಕಾರಾತ್ಮಕವಾಗಿ ಉತ್ತರಿಸಿದೆ.**

21. **ಅಂಶ 5** – 1 ರಿಂದ 4 ನೇ ಅಂಶಗಳಿಗೆ ಮೇಲೆ ಕೊಟ್ಟ ಕಾರಣಗಳಿಗಾಗಿ ಈ ಕೆಳಕಂಡಂತೆ ಅಂತಿಮ ಆದೇಶ ಮಾಡಿದೆ.

## **ಆ ದೇ ಶ**

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 271(1) ರಡಿಯಲ್ಲಿ ದತ್ತವಾದ ಅಧಿಕಾರದ ಮೇರೆಗೆ ಕಲಂ.281, 125(ಎ) ಮತ್ತು (ಬಿ) ಹಾಗೂ ಕಲಂ.106(1) ಭಾರತೀಯ ನಾಗರಿಕ ಸಂಹಿತೆ ಕಾಯ್ದೆಯಡಿಯಲ್ಲಿ 1 ನೇ ಆರೋಪಿಯನ್ನು ನಿರಪರಾಧಿ ಎಂದು ತೀರ್ಮಾನಿಸಿ ಬಿಡುಗಡೆ ಮಾಡಲಾಯಿತು.

1 ನೇ ಆರೋಪಿ ಬರೆದುಕೊಟ್ಟ ಜಾಮೀನು ಮುಚ್ಚಳಿಕೆಯನ್ನು ಮುಂದಿನ ಆರು ತಿಂಗಳ ಅವಧಿಯವರೆಗೆ ವಿಸ್ತರಿಸಲಾಯಿತು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು, ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ, ಅವರು ತಯಾರಿಸಿದ ಪ್ರತಿಯನ್ನು ಓದಿ ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ 01.07.2026 ರಂದು ಘೋಷಿಸಲಾಯಿತು)

RAGHUNATHA GOWDA K T
Digitally signed by RAGHUNATHA GOWDA K T
Date: 2026.07.01 18:22:49 +0530

**(ರಘುನಾಥಗೌಡ ಕೆ.ಟಿ.)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನರಸಿಂಹರಾಜಪುರ.

## **– ಅನುಬಂಧ –**

ಅ) ಅಭಿಯೋಜಕರ ಪರ ವಿಚಾರಣೆ ಮಾಡಿರುವ ಸಾಕ್ಷಿಗಳು:

ಪ್ರಾಸಾ.1 – ರಮೇಶ.
ಪ್ರಾಸಾ.2 – ಶಾಂತಮ್ಮ.
ಪ್ರಾಸಾ.3 – ಕೃಷ್ಣಮೂರ್ತಿ.

ಪ್ರಾಸಾ.4 – ಸೋಮಶೇಖರ.

ಪ್ರಾಸಾ.5 – ಜಾರ್ಜ್.

ಪ್ರಾಸಾ.6 – ನಿರಂಜನ್ ಗೌಡ ಬಿ.ಎಸ್.

ಪ್ರಾಸಾ.7 – ಗುರುದತ್ತ ಕಾಮತ್.

ಆ) ಅಭಿಯೋಜಕರ ಪರ ಗುರುತಿಸಿಕೊಂಡಿರುವ ದಾಖಲಾತಿಗಳು:

ನಿಪಿ.1 – ದೂರು.

ನಿಪಿ.1(ಎ) – ಪ್ರಾಸಾ-1 ರವರ ಸಾಕ್ಷಿ ಸಹಿ.

ನಿಪಿ.2 – ಸ್ಥಳ ಪಂಚನಾಮೆ.

ನಿಪಿ.2(ಎ) – ಪ್ರಾಸಾ-1 ರವರ ಸಾಕ್ಷಿ ಸಹಿ.

ನಿಪಿ.3-4 – ಭಾವಚಿತ್ರ.

ನಿಪಿ.5 – ವಾಹನ ಅಮಾನತ್ತು ಮಹಜರ್.

ನಿಪಿ.5(ಎ) – ಪ್ರಾಸಾ-4 ರವರ ಸಾಕ್ಷಿ ಸಹಿ.

ನಿಪಿ.6-7 – ಭಾವಚಿತ್ರಗಳು.

ನಿಪಿ.8 – ಅಡಕ ಮುದ್ರಕ (ಸಿ.ಡಿ.).

ನಿಪಿ.9 – ಪ್ರಾಸಾ-2 ರವರ ಹೇಳಿಕೆ.

ನಿಪಿ.10 – ಪ್ರಥಮ ವರ್ತಮಾನ ವರದಿ.

ನಿಪಿ.11 – ಶವ ತನಿಖಾ ವರದಿ.

ನಿಪಿ.12 – ಭಾವಚಿತ್ರ.

ನಿಪಿ.13 – ಮರಣೋತ್ತರ ಪರೀಕ್ಷಾ ವರದಿ.

ನಿಪಿ.14-16 – ಗಾಯದ ಪ್ರಮಾಣಪತ್ರಗಳು.

ನಿಪಿ.17 – 133 ರಲ್ಲಿ ನೀಡಿದ ನೋಟೀಸ್.

ನಿಪಿ.18 – 133 ರಲ್ಲಿ ನೀಡಿದ ನೋಟೀಸ್ ಗೆ ಉತ್ತರ.

Visit **ecourts.gov.in** for updates or download mobile app “**eCourts Services**” from Android or iOS

ನಿಪಿ.19–20 – ಇಂಡೆಮಿನಿಟಿ ಬಾಂಡ್‌ಗಳು.

ನಿಪಿ.21 – ಮನವಿ ಪ್ರತಿ.

ನಿಪಿ.22 – ವಾಹನ ತಪಾಸಣಾ ವರದಿ.

ಇ) ಆರೋಪಿತನ ಪರ ವಿಚಾರಣೆ ಮಾಡಿರುವ ಸಾಕ್ಷಿಗಳು:

– ಇಲ್ಲ –

ಈ) ಆರೋಪಿತನ ಪರ ಗುರುತಿಸಿಕೊಂಡಿರುವ ಸಾಕ್ಷಿಗಳು:

– ಇಲ್ಲ –

RAGHUNATHA GOWDA K T
Digitally signed by RAGHUNATHA GOWDA K T
Date: 2026.07.01 18:22:59 +0530

**(ರಘುನಾಥಗೌಡ ಕೆ.ಟಿ.)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನರಸಿಂಹರಾಜಪುರ.

Visit **ecourts.gov.in** for updates or download mobile app "**eCourts Services**" from Android or iOS